# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## SC.93/2021

**P.W.-09**
**C.W.-15**

| | | |
|---|---|---|
| ಹೆಸರು | : | ಲಕ್ಷ್ಮೀ |
| ಗಂಡನ ಹೆಸರು | : | ಚಂದ್ರ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಕುರಿಮಂಡಿ , ಮೈಸೂರು ನಗರ |

**ದಿನಾಂಕಃ 15.07.2023. ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ಕಳೆದ ಆರು ವರ್ಷಗಳಿಂದ ನಾನು ಮೈಸೂರು ನಗರದ ಕುರಿಮಂಡಿಯಲ್ಲಿ ಸ್ವಂತ ಮನೆಯಲ್ಲಿ ವಾಸ ಮಾಡುತ್ತಿದ್ದೇನೆ. ಆ ಕಟ್ಟಡದಲ್ಲಿ ಒಟ್ಟು ಎರಡು ಮನೆಗಳಿವೆ. ಕಳಗೆ ಒಂದು, ಮೇಲೆ ಇನ್ನೊಂದು. ನಾನು ಕೆಳಗಡೆ ಮನೆಯಲ್ಲಿ ವಾಸವಿದ್ದು, ಮೇಲಿನ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದೆ. ಮೇಲಿನ ಮನೆಯನ್ನು ವಿನಯ್ ನ ತಂದೆಗೆ ಬಾಡಿಗೆಗೆ ಕೊಟ್ಟಿದ್ದೆ. ನಾನು ಆ ಮನೆಗೆ ಬಂದ 6 ತಿಂಗಳ ನಂತರ ಮೇಲಿನ ಮನೆಯನ್ನು ಅವರಿಗೆ ಬಾಡಿಗೆಗೆ ಕೊಟ್ಟಿದ್ದೆ. ತಿಂಗಳ ಬಾಡಿಗೆ ರೂ.5000/- ಆಗಿತ್ತು. ಆ ಮನೆಯಲ್ಲಿ ವಿನಯ್ ನ ತಂದೆ ತಾಯಿ ಮತ್ತು ಇಬ್ಬರು ಮಕ್ಕಳು ವಾಸವಿದ್ದರು. ಅಂದರೆ ವಿನಯ್ ಹಾಗೂ ಆತನ ತಮ್ಮ. ಬಾಡಿಗೆಯ ಕರಾರನ್ನು ಮಾಡಿಕೊಂಡಿದ್ದೆವೋ ಇಲ್ಲವೋ ನನಗೆ ಈಗ ನೆನಪಿಲ್ಲ.

2. ಈ ಪ್ರಕರಣದಲ್ಲಿ ಮೃತ ಪಟ್ಟಿರುವ ರವಿ ಉ ಬಚ್ಚ ನನಗೆ ಗೊತ್ತಿಲ್ಲ. ಆತನನ್ನು ನಾನು ನೋಡಿರಲಿಲ್ಲ. ಈಗ ತೋರಿಸುತ್ತಿರುವ ದಾಖಲಾತಿಯ ಮೇಲೆ ನನ್ನ ಸಹಿ ಇರುತ್ತದೆ. ಅದು ಬಾಡಿಗೆ ಕರಾರಿನ ಪ್ರತಿ ಆಗಿರುತ್ತದೆ. ಅದರ ಮೇಲೆ ಬಾಬೂ ಎನ್ನುವವರ ಸಹಿ ಇರುತ್ತದೆ. ಬಾಬು ಎಂದರೆ ವಿನಯ್ ನ ತಂದೆಯ ಹೆಸರು.

3. ನಮ್ಮ ಮನೆಯ ಬಳಿಯಲ್ಲಿ ಗಲಾಟೆ ಆಗಿರಬಹುದು, ನಾನು ಸುಮ್ಮನಾದೆ. ಯಾರ ಯಾರ ನಡುವೆ ಗಲಾಟೆ ಆಗಿತ್ತು ಎನ್ನುವುದು ಗೊತ್ತಿಲ್ಲ.

**SC.No.93/2021**
**P.W.-09**
**C.W.-15**

4. ಪೋಲೀಸರು ನನ್ನನ್ನು ಕರೆದು ವಿಚಾರಿಸಿ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ -**

5. ರವಿ ಉ ಬಚ್ಚ ಈಗ ಇಲ್ಲ ಎನ್ನುವುದು ನನಗೆ ಗೊತ್ತು. ದಿಃ 12.12.2021 ರಂದು ರಾತ್ರಿ 08.30 ರ ಸಮಯದಲ್ಲಿ, ರವಿ ಉ ಬಚ್ಚ ನಮ್ಮ ಮನೆಯ ಮೇಲೆ ಬಾಡಿಗೆಗೆ ಇದ್ದ 1 ನೇ ಆರೋಪಿಯ ಮನೆಗೆ ಹೋಗಿ ವಿನಯ್ ನಲ್ಲಿ ಆತ ಹಣವನ್ನು ವಾಪಾಸ್ಸು ಕೊಡದೇ ಇರುವ ವಿಚಾರವಾಗಿ, ಹಣವನ್ನು ಕೊಡುವಂತೆ ಅವಾಚ್ಯವಾಗಿ ಬೈದು ಗಲಾಟೆ ಮಾಡಿ ಹೋಗಿದ್ದ ಎನ್ನುವುದು ಸರಿ . ಇದೇ ರೀತಿ ರವಿ ಉ ಬಚ್ಚ ಈ ಹಿಂದೆಯೂ ಹಲವು ಬಾರಿ ಕುಡಿದುಕೊಂಡು ಬಂದು ವಿನಯ್ ಮನೆಯ ಬಳಿಯಲ್ಲಿ ಗಲಾಟೆ ಮಾಡಿದ್ದ ಎನ್ನುವುದು ಸರಿ . ಆಗ ನಾನು, ಬಾಬೂ ಹಾಗೂ ಆತನ ಮಗ ವಿನಯ್ ನನ್ನು ಕರೆದು ಇದು ಸಂಸಾರಸ್ಥರು ಇರುವ ಮನೆಯಾದ್ದರಿಂದ, ಮನೆಯ ಬಳಿ ಯಾರೋ ಬಂದು ಗಲಾಟೆ ಮಾಡುವುದು ಸರಿ ಬರುವುದಿಲ್ಲ, ನೀವು ಈಗಲೇ ಮನೆಯನ್ನು ಖಾಲಿ ಮಾಡಿ ಎಂದು ಹೇಳಿದ್ದೆ , ಎನ್ನುವುದು ಸರಿ . ಆಗ ಅವರು, ಮತ್ತೆ ಈ ರೀತಿಯಲ್ಲಿ ಆಗಲು ಬಿಡುವುದಿಲ್ಲ , ಎಂದು ಹೇಳಿದ್ದರು ಎನ್ನುವುದು ಸರಿ. ಈ ವಿಷಯವನ್ನು ನಾನು ಪೋಲೀಸರ ಮುಂದೆ ಹೇಳಿರುತ್ತೇನೆ ಎನ್ನುವುದು ಸರಿ .

**ಪಾಟೀಸವಾಲುಃ ಆರೋಪಿಗಳ ಪರ ವಕೀಲರಿಂದಃ -**

6. ಬಾಡಿಗೆಗೆ ಬಂದಾಗ ಸ್ವಲ್ಪ ದಿನ ಬಾಡಿಗೆಯನ್ನು ಚೆನ್ನಾಗಿ ಪ್ರತಿ ತಿಂಗಳ ಕೊಟ್ಟರು. ನಂತರದಲ್ಲಿ ಏನೇನೋ ಸಮಸ್ಯೆಗಳನ್ನು ಹೇಳಿಕೊಂಡು ಇದ್ದರು. ಬಾಬೂ ಮತ್ತು ಆತನ ಮಗ ವಿನಯ್ ಏನು ವ್ಯವಹಾರ ಮಾಡುತ್ತಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಅವರ ಮನೆಗೆ ಬಂದು ಹೋಗುತ್ತಿದ್ದವರ ವಿವರ ನನಗೆ ಗೊತ್ತಿಲ್ಲ. ಹಣದ ಬಗ್ಗೆ ಮನೆಯ ಹತ್ತಿರ ಗಲಾಟೆ ಮಾಡುತ್ತಿದ್ದಾಗ, ಎಷ್ಟು ಹಣದ ಬಗ್ಗೆ ಎನ್ನುವುದು ನನಗೆ ಗೊತ್ತಿಲ್ಲ. ಮೇಲಿನ ಮನೆಯ ಬಳಿಗೆ ಬಂದು ಯಾರೂ ಹಣಕ್ಕಾಗಿ ಗಲಾಟೆ ಮಾಡಿರುವುದಿಲ್ಲ ಎನ್ನುವುದು ಸರಿಯಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ  ಇಲ್ಲ ಃ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.